ಹಿಪ್ಪರಗಿ ನೀರಾವರಿ ಯೋಜನೆಯಡಿ, ಸಾವಳಗಿ ಭಾಗದ ಬರಗಾಲ ಪೀಡಿತ ಪ್ರದೇಶದ 9045 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು, "ಸಾವಳಗಿ-ತುಂಗಳ ಏತ ನೀರಾವರಿ ಯೋಜನೆ"ಯನ್ನು ಹಲ್ಯಾಳ ಏತ ನೀರಾವರಿ ಯೋಜನೆಯ ಪೂರ್ವ ಕಾಲುವೆಯ ಕಿ.ಮಿ.39.98ರಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ಆ) ಆಲಮಟ್ಟಿ ಜಲಾಶಯದಿಂದ ಸಂಗ್ರಹಿತ ಹಿನ್ನೀರಿನಲ್ಲಿ 1.4 ಟಿ.ಎಂ.ಸಿ. ನೀರನ್ನು ಸಾವಳಗಿ ಭಾಗದ ಜಮೀನುಗಳಿಗೆ ನೀರಾವರಿಗಾಗಿ ಬಳಸಲು ಮೀಸಲಿಟ್ಟಿರುವುದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಹಿಪ್ಪರಗಿ ನೀರಾವರಿ ಯೋಜನೆಗೆ ಹಂಚಿಕೆ ಮಾಡಲಾಗಿರುವ 12.10 ಟಿಎಂಸಿ ನೀರಿನ ಪ್ರಮಾಣದಲ್ಲಿ, "ಸಾವಳಗಿ-ತುಂಗಗಳ ಏತ ನೀರಾವರಿ ಯೋಜನೆ"ಗಾಗಿ 1.28 ಟಿಎಂಸಿ ನಿಗದಿಪಡಿಸಿಕೊಳ್ಳಲಾಗಿದೆ. ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಸಾವಳಗಿ ಭಾಗದ ಜಮೀನುಗಳ ನೀರಾವರಿಗಾಗಿ ಯಾವುದೇ ನೀರನ್ನು ಮೀಸಲಿಟ್ಟಿರುವುದಿಲ್ಲ.

ಇ) ಜಮಖಂಡಿ ತಾಲೂಕಿನ ತುಬಚಿ ಹತ್ತಿರ ಕೃಷ್ಣಾ ನದಿಯ ನೀರನ್ನು ಎತ್ತಿ ಸಾವಳಗಿಯ ಜಾಕ್‌ವೆಲ್‌ವರೆಗೆ ನೀರನ್ನು ಪೂರೈಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಹಿಪ್ಪರಗಿ ಯೋಜನೆಯಡಿಯಲ್ಲ, ಈಗಾಗಲೇ "ಸಾವಳಗಿ-ತುಂಗಳ ಏತ ನೀರಾವರಿ ಯೋಜನೆ'ಯನ್ನು ಕೈಗೆತ್ತಿಕೊಂಡಿರುವುದರ ಮೇರೆಗೆ ತುಬಚಿ ಹತ್ತಿರ ಕೃಷ್ಣಾ ನದಿಯಿಂದ ನೀರು ಎತ್ತಿ ಸಾವಳಗಿ ಜಾಕ್‌ವೆಲ್‌ಗೆ ಪೂರೈಸುವ ಯೋಜನೆಯ ಪ್ರಸ್ತಾವನೆ ಇರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(258)153**
ಸದಸ್ಯರ ಹೆಸರು	:	**ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)**
ಉತ್ತರಿಸಬೇಕಾದ ಸಚಿವರು	:	**(ಶ್ರೀ ಗೂಳಿ ಹಟ್ಟಿ ಡಿ.ಶೇಖರ್) ಜವಳಿ, ಯುವಜನಸೇವಾ ಮತ್ತು ಕ್ರೀಡಾ ಸಚಿವರು**

ಅ) ಗ್ರಾಮೀಣ ಪ್ರದೇಶದ ಕ್ರೀಡಾಪ್ರತಿಭೆಗೆ ಹಾಗೂ ವಿದ್ಯಾವಂತ ಅಂಗವಿಕಲರಿಗೆ ಸರ್ಕಾರ ಉದ್ಯೋಗದಲ್ಲಿ ಹಾಗೂ ಖಾಸಗಿ ವಲಯದಲ್ಲಿ ಶೇಕಡಾ 5/- ಅನುಪಾತದಲ್ಲಿ ಅವಕಾಶ ಕಲ್ಪಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಇಲ್ಲ.

ಆ) ಹಾಗಿಲ್ಲದಿದ್ದಲ್ಲಿ ಯಾವ ಹಂತದಲ್ಲಿ ಈ ನೇಮಕಾತಿ ನಡೆಸಲಾಗುವುದು;

ಅನ್ವಯಿಸುವುದಿಲ್ಲ.

ಇ) ಇತ್ತೀಚಿನ ವರ್ಷಗಳಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು;

ಅನ್ವಯಿಸುವುದಿಲ್ಲ.

ಈ) ರಾಜ್ಯದಲ್ಲಿರುವ ಕನ್ನಡಿಗರಿಗೆ ದೊಡ್ಡ ಉದ್ದಿಮೆಗಳಲ್ಲಿ, ತಾಂತ್ರಿಕ ಸಂಸ್ಥೆಗಳಲ್ಲಿ ಯಾವ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ;

ಅನ್ವಯಿಸುವುದಿಲ್ಲ.

ಉ) ಹಾಗಿದ್ದಲ್ಲಿ, ಈ ಸಂಬಂಧದಲ್ಲಿ ಸರ್ಕಾರದ ಮಾರ್ಗ ಸೂತ್ರವೇನಾದರೂ ಇದೆಯೇ?

ಅನ್ವಯಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (259)154

ಸದಸ್ಯರ ಹೆಸರು : ಶ್ರೀ ಲಾಲಾಜಿ ಆರ್.ಮೆಂಡನ್.

ಉತ್ತರಿಸುವವರು : (ಶ್ರೀ ಜೆ.ಕರುಣಾಕರ ರೆಡ್ಡಿ)

ಮಾನ್ಯ ಕಂದಾಯ ಸಚಿವರು.

ಅ) ಕಂದಾಯ ಇಲಾಖೆಯ ಭೂ ನ್ಯಾಯ ಮಂಡಳಿಗಳಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಒಟ್ಟು ಎಷ್ಟು ಪ್ರಕರಣಗಳು ರಾಜ್ಯದಲ್ಲಿ ಬಾಕಿ ಇರುತ್ತವೆ;

ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ:431529.

ಆ) ಇವುಗಳ ಇತ್ಯರ್ಥಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಅರ್ಜಿಗಳನ್ನು ಇತ್ಯರ್ಥ ಪಡಿಸಲು ನಿಗಧಿ ಪಡಿಸಿದ್ದ ಕಾಲಾವಧಿಯು ದಿ:26.04.2008ಕ್ಕೆ ಮುಕ್ತಾಯವಾಗಿರುತ್ತದೆ. ಈ ಅವಧಿಯನ್ನು ವಿಸ್ತರಿಸಲು ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಕಾಯ್ದೆಗೆ ತಿದ್ದುಪಡಿ ತಂದ ನಂತರ ಬಾಕಿ ಇರುವ ಅರ್ಜಿಗಳನ್ನು ಇತ್ಯರ್ಥ ಪಡಿಸಲು ಬಗರ್ ಹುಕುಂ ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗುವುದು.

ಇ) ತ್ವರಿತ ವಿಲೇವಾರಿಗೆ ಹೆಚ್ಚು ಸಮಿತಿ ಉಪ ಸಮಿತಿಗಳ ರಚನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;